ಓ ಎಸ್ ನಂ. 09/2020 ಪಿ.ಡಬ್ಲ್ಯೂ-1

<u>ದಿನಾಂಕಃ 15-07-2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲು ಶ್ರೀಮತಿ ವಿ ಬಿ ವಕೀಲರಿಂದಃ-</u>

ನಿಪಿ-1 ಮತ್ತು 2 ನ್ನು ಬರೆದ ನಂತರ ದುಡ್ಡನ್ನು ಕೊಡಲಾಯಿತು. ನಿಪಿ-1 ಮತ್ತು 2 ನ್ನು 12.30 ರಿಂದ 1.00 ಗಂಟೆ ಸಮಯದಲ್ಲಿ ಬರೆಯಲಾಯಿತು. ನಾನು ಈ ಕೇಸು ಹಾಕುವ ಪೂರ್ವದಲ್ಲಿ ಪ್ರತಿವಾದಿಯ ತಾಯಿ ಜಯಮ್ಮ ನನಗೆ ಒಂದು ನೋಟೀಸನ್ನು ಕಳುಹಿಸಿದ್ದರು ಎನ್ನುವುದು ನಿಜ, ಅಷ್ಟರಲ್ಲಿ ನಾನು ನನ್ನ ವಕೀಲರಿಗೆ ಕೇಸು ಹಾಕಲು ಮಾಹಿತಿ ಕೊಟ್ಟಿದ್ದೆ ಎಂದು ಹೇಳುತ್ತಾರೆ. ನಾನು ಸದರಿ ನೋಟೀಸಿಗೆ ಉತ್ತರ ಕೊಟ್ಟಿದ್ದೇನೆ ಎನ್ನುವುದು ಸತ್ಯ. ಆನಂತರ ಪುನಃ ಜಯಮ್ಮ ರವರು ನನಗೆ ಇನ್ನೊಂದು ನೋಟೀಸು ಕೊಟ್ಟರು ಎನ್ನುವುದು ಸರಿಯಲ್ಲ. ನನಗೆ ಒಂದೇ ನೋಟೀಸು ತಲುಪಿದೆ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-3 ರಲ್ಲಿ ನಿಪಿ-1 ಹಾಗೂ 2 ನ್ನು ಯಾರು ಬರೆದಿದ್ದಾರೆ, ಅದರಲ್ಲಿ ಸಾಕ್ಷಿದಾರರು ಯಾರು ಎಂದು ನಮೂದು ಮಾಡಿಲ್ಲ ಎನ್ನುವುದು ಸರಿ. ಸದರಿ ನೋಟೀಸಿಗೆ ಜಯಮ್ಮ ಉತ್ತರ ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ, ನನಗೆ ಯಾವುದೇ ಉತ್ತರ ಬಂದಿಲ್ಲ. ನಾನು ಪ್ರತಿವಾದಿಗೆ ಹಣ ಕೊಡುವ ಪೂರ್ವದಲ್ಲೇ ಎಲ್ಲಾ ಹಳೆಯ ನೋಟುಗಳನ್ನು ಬ್ಯಾಂಕಿನಲ್ಲಿ ಎಕ್ಸ್ ಚೇಂಜ್ ಮಾಡಿದ್ದೆ, ನಾನು ಎಲ್ಲೂ ಕೂಡ ಆಕೆಗೆ ಹಳೆಯ ನೋಟುಗಳನ್ನು ಕೊಟ್ಟಿದ್ದೆ ಎಂದು ಹೇಳಿಲ್ಲ. ನಾನು ಹಳೆಯ ನೋಟನ್ನು ಕೊಟ್ಟು ಹೊಸ ನೋಟು ಪಡೆದುಕೊಂಡ ಬಗ್ಗೆ ಬ್ಯಾಂಕಿನಿಂದ ನನಗೆ ಯಾವುದೇ ದಾಖಲೆ ಕೊಡಲಿಲ್ಲ. ಯಾವುದೇ ವ್ಯಕ್ತಿಯು ಬ್ಯಾಂಕಿನಲ್ಲಿ ಹಣ ಹಾಕುವುದು ಹಾಗೂ ತೆಗೆಯುವುದು ಮಾಡಿದರೆ ಅದು ಪಾಸ್ ಬುಕ್ ನಲ್ಲಿ ಬರುತ್ತದೆ ಎನ್ನುವುದು ಸರಿ. ಆದರೆ ನಾನು ಆ ಹಣವನ್ನು ನನ್ನ ಅಕೌಂಟಿಗೆ ಹಾಕಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಾಮಾನ್ಯವಾಗಿ ಒಂದೇ ಸಲಿ 6 ಲಕ್ಷ ಹಣವನ್ನು ಕೂಡಿಸುವುದು ಕಷ್ಟ ಎನ್ನುವ ಪ್ರಶ್ನೆಗೆ ಸಾಕ್ಷಿ

ಹೌದು ನಾನು ಸೀನಿಯರ್ ಸಿಟಿಜನ್ ಸ್ಕೀಂ ನಲ್ಲಿ ಹಾಕಬೇಕು ಎಂದು ಹಣ ಕೂಡಿಸಿಕೊಂಡು ಇಟ್ಟಿದ್ದೆ ಎಂದು ಸಾಕ್ಷಿ ಹೇಳುತ್ತಾರೆ. ನಾನು 2013-14 ರಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದೆ ಹಾಗೂ ಅದಕ್ಕೆ ಪ್ರತಿವಾದಿಯ ತಾಯಿ ಮೆಂಬರ್ ಆಗಿದ್ದರು ಎನ್ನುವುದು ಸುಳ್ಳು, ನಾನು ಯಾವುದೇ ಚೀಟಿ ವ್ಯವಹಾರ ಮಾಡುತ್ತಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಚೀಟಿ ವ್ಯವಹಾರ ನಡೆಯುತ್ತಿದ್ದಾಗ ಮಧ್ಯದಲ್ಲಿ ಪ್ರತಿವಾದಿಯ ತಾಯಿಯು ಹಣ ತೆಗೆದುಕೊಂಡಿದ್ದರಿಂದ ಆ ಹಣದ ಭದ್ರತೆಗಾಗಿ ನಾನು ಪ್ರತಿವಾದಿಯ ತಾಯಿಯಿಂದ 4 ಖಾಲಿ ಚೆಕ್ಕುಗಳು, ಒಂದು ಪ್ರಾಮಿಸರಿ ನೋಟ್ ಹಾಗೂ ಈ ಕೇಸಿನ ಪ್ರತಿವಾದಿಯಿಂದ ಒಂದು ಪ್ರಾಮಿಸರಿ ನೋಟನ್ನು ಭದ್ರತೆಗಾಗಿ ಪಡೆದುಕೊಂಡಿದ್ದೇನೆ ಎಂದು ಹೇಳುವುದು ಸುಳ್ಳು.

ಮುಂದುವರಿದ ಪಾಟಿ ಸವಾಲಿಗಾಗಿ ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

ಚೀಟಿ ಹಣವನ್ನು ಪ್ರತಿವಾದಿಯ ತಾಯಿ ಸಂಪೂರ್ಣವಾಗಿ ಕಟ್ಟಿದ ನಂತರ ಅವರು ತಾವು ಕೊಟ್ಟ ದಾಖಲೆಗಳನ್ನು ನನ್ನ ಬಳಿ ಮರಳಿ ಕೇಳಿದಾಗ ನಾನು ಸದರಿ ದಾಖಲೆಗಳನ್ನು ಹರಿದು ಹಾಕಿದ್ದೇನೆ ಎಂದು ಹೇಳಿರುತ್ತೇನೆ, ಅದನ್ನು ಪ್ರತಿವಾದಿ ಹಾಗೂ ಆಕೆಯ ತಾಯಿ ನಂಬಿದರು ಎನ್ನುವುದು ಸರಿಯಲ್ಲ. ನಾನು ಹಾಗೆ ಯಾವುದೇ ಚೀಟಿ ವ್ಯಾಪಾರ ಮಾಡಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು 2 ನೇ ಬಾರಿ ಚೀಟಿಯನ್ನು ತೆಗೆದುಕೊಳ್ಳಿ ಎಂದು ಕೇಳಿದಾಗ ಪ್ರತಿವಾದಿ ಹಾಗೂ ಆಕೆಯ ತಾಯಿ ಒಪ್ಪದೇ ಇದ್ದ ಕಾರಣ ನನ್ನ ಬಳಿ ಇದ್ದ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ನಾನು ಈ ಸುಳ್ಳು ಕೇಸನ್ನು ಪ್ರತಿವಾದಿಯ ಮೇಲೆ ಹಾಕಿದ್ದೇನೆ ಎಂದು ಹೇಳುವುದು ಸುಳ್ಳು. ಪ್ರತಿವಾದಿಯು ನನಗೆ ಯಾವುದೇ ಪ್ರಾಮಿಸರಿ ನೋಟನ್ನು ಬರದುಕೊಟ್ಟಿರಲಿಲ್ಲ, ಆದುದರಿಂದಲೇ ನಾನು ಸದರಿ ನಿಪಿ-3 ರಲ್ಲಿ ನಿಪಿ-1 ಹಾಗೂ 2 ನ್ನು ಯಾರು ಬರೆದರು ಹಾಗೂ ಅದರ ಸಾಕ್ಷಿದಾರರು ಯಾರು ಎಂದು ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದು ಹೇಳುವುದು ಸರಿಯಲ್ಲ. ನನಗೆ ಪ್ರತಿವಾದಿಗೆ 6 ಲಕ್ಷ ರೂಪಾಯಿಗಳನ್ನು ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದು ಹೇಳುವುದು ಸರಿಯಲ್ಲ. ನಾನು ಹಳೆಯ

ಹಣವನ್ನು ಎಕ್ಸ್ ಚೇಂಜ್ ಮಾಡಿರುವ ಬಗ್ಗೆ ತೋರಿಸಲು ನನ್ನ ಪಾಸ್ ಬುಕ್ ಅನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದರೆ ಗೊತ್ತಾಗುತ್ತದೆ ಎನ್ನುವುದು ಸುಳ್ಳು, ಯಾಕೆಂದರೆ ನಾನು ಅದನ್ನು ಅಕೌಂಟಿಗೆ ಹಾಕಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಅನಿತ, ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. 15-07-2022.